**1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**

**ಕೊಡಗು–ಮಡಿಕೇರಿ**

**ಎಸ್.ಸಿ ಸಂಖ್ಯೆ 102/2025**

ಫ್ರಾಸಾಃ 12

ಚಾಸಾಃ13

| | | |
|---|---|---|
| ಸಾಕ್ಷಿದಾರರ ಹೆಸರು | : | ಡಾಃ ಪವಮಾನ್ |
| ತಂದೆಯ ಹೆಸರು | : | ಪಂಡಿತ್ |
| ವಯಸ್ಸು | : | 43 ವರ್ಷ |
| ವೃತ್ತಿ | : | ನರರೋಗ ತಜ್ಞ, ಎಸ್ಟರ್ ಆಸ್ಪತ್ರೆ, ಕಾಸರಗೂಡು |
| ವಾಸ | : | ಮಂಗಳೂರು |

**ಸಾಕ್ಷಿಯನ್ನು ದಿನಾಂಕ 24–07–2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ ವಿಸಿ ಮುಖಾಂತರ.**

1. ನಾನು ಡಾಃ ಸುನೀಲ್ ಶೆಟ್ಟಿಯವರು ಅನುಪಸ್ಥಿತಿಯಲ್ಲಿ ಇದ್ದಾಗ ಅವರ ಬದಲಿಗೆ ತುರ್ತು ಚಿಕಿತ್ಸೆಗಾಗಿ ನರರೋಗ ತಜ್ಞನಾಗಿ ಎಜೆ ಆಸ್ಪತ್ರೆ, ಮಂಗಳೂರಿಗೆ ಗಾಯಾಳುಗಳಿಗೆ ಚಿಕಿತ್ಸೆ ಕೊಡಲು ಹೋಗುತಿದ್ದೆ. ನಾನು ಕಳೆದ 9 ವರ್ಷಗಳಿಂದ ನರರೋಗ ತಜ್ಞನಾಗಿ ಕರ್ತವ್ಯ ನಿರ್ವಹಿಸುತಿದ್ದೇನೆ.

2. ದಿನಾಂಕ 22–06–2025 ರಂದು ನಾನು ಬೆಳಿಗ್ಗೆ ಗಾಯಾಳುವನ್ನು ನೋಡಿದಾಗ ಅವರ ತಲೆಗೆ ಹಲ್ಲೆಯಿಂದ ಗಾಯವಾಗಿರುವುದು ಕಂಡು ಬಂದಿರುತ್ತದೆ. ಗಾಯಾಳು ರವರು ನಾನು ಪರೀಕ್ಷಿಸಿದಾಗ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ಅವರ ತಲೆಯಿಂದ ರಕ್ತ ಬರುತಿದ್ದು, ತಲೆಗೆ ತಾತ್ಕಲಿಕ ಬ್ಯಾಂಡೇಜ್ ನ್ನು ಸುತ್ತಲಾಗಿತ್ತು. ಈ ಬಗ್ಗೆ ಸಿ.ಟಿ ಸ್ಕ್ಯಾನ್ ಮಾಡಲಾಗಿ ತಲೆಯಲ್ಲಿ ರಕ್ತ ಹೆಪ್ಪುಗಟ್ಟಿದ್ದು

ಕಂಡು ಬಂದಿರುತ್ತದೆ.

3. ಗಾಯಾಳುವಿನ ಪರಿಸ್ಥಿತಿಯನ್ನು ನೋಡಿ ಬ್ಯಾಂಡೇಜ್ ನ್ನು ತೆರೆದು ನೋಡಿದಾಗ ತಲೆಯ ಒಳಗಿನ ಮೆದುಳು ಗಾಯದ ಮೂಲಕ ಹೊರಗೆ ಬಂದಿತ್ತು. ಆತನ ಈ ಪರಿಸ್ಥಿತಿಯನ್ನು ನೋಡಿ ಆತನಿಗೆ ತುರ್ತು ಚಿಕಿತ್ಸೆಯನ್ನು ಕೂಡಲೇ ನೀಡಬೇಕಾಗಿದ್ದರಿಂದ ಆತನನ್ನು ತುರ್ತು ಶಸ್ತ್ರ ಚಿಕಿತ್ಸಾ ಘಟಕ್ಕೆ ಕರೆದುಕೊಂಡು ಹೋಗಲಾಯಿತು.

4. ಆತನಿಗೆ ಶಸ್ತ್ರ ಚಿಕಿತ್ಸೆಯನ್ನು ನೀಡಿದ ನಂತರ ಆತನನ್ನು ತೀವ್ರ ನಿಗಾ ಘಟಕಕ್ಕೆ ಸ್ಥಳಾಂತರಿಸಲಾಯಿತು. ಆತನು ಕೋಮ ಸ್ಥಿತಿಯಲ್ಲಿ ಇದ್ದು ಒಂದು ತಿಂಗಳ ನಂತರ ಕ್ರಮೇಣ ಕೋಮದಿಂದ ಹೊರಬಂದು ಕಣ್ಣನ್ನು ತೆರೆದು ನೋಡಲು ಆರಂಭಿಸಿರುತ್ತಾನೆ.

5. ಗಾಯಾಳುವು ಕೋಮ ಸ್ಥಿತಿಯಿಂದ ಹೊರಬಂದು ಕೈ, ಕಾಲುಗಳನ್ನು ಅಲ್ಲಾಡಿಸುವ ಸ್ಥಿತಿಗೆ ಬಂದಾಗ ಅವರನ್ನು ಫಿಜಿಯೋ ತೆರಪಿಗಾಗಿ ನಮ್ಮ ಆಸ್ಪತ್ರೆಯಿಂದ ಬಿಡುಗಡೆಗೊಂಡು ಕಣಚೂರು ಆಸ್ಪತ್ರೆ, ಮಂಗಳೂರಿಗೆ ವೈಯಕ್ತಿಕ ಕಾರಣದಿಂದ ಹೋಗಿರುತ್ತಾರೆ. ನಮ್ಮ ಆಸ್ಪತ್ರೆಯಲ್ಲಿ ಬಿಡುಗಡೆ ಹೊಂದುವ ವರೆಗೂ ಅವರು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ ಮತ್ತು ಅವರ ಗಂಟಲಿನಲ್ಲಿ ತೂತು ಮಾಡಿ ಒಂದು ಪೈಪನ್ನು ಇಟ್ಟು ಆಹಾರವನ್ನು ನೀಡುತಿದ್ದೆವು.

6. ಪೊಲೀಸರು ದಿನಾಂಕ 22-06-2025 ರಂದು ಗಾಯಾಳು ವರಣ್ ರವರು ಹೇಳಿಕೆ ನೀಡಲು ಶಕ್ತರೇ ಅಥವಾ ಅಶಕ್ತರೇ ಎಂದು ಹೇಳಿ ಒಂದು ದೃಢೀಕರಣ ಪತ್ರವನ್ನು ನೀಡುವಂತೆ ಕೋರಿಕೆ ಪತ್ರವನ್ನು ನೀಡಿರುತ್ತಾರೆ. ಸಾಕ್ಷಿಯು ಆ ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ-17** ಎಂದು, ಅದರಲ್ಲಿ

ಇರುವ ಸಾಕ್ಷಿ ಸಹಿಯನ್ನು **ನಿಪಿ–17(ಎ)** ಎಂದು ಗುರುತಿಸಲಾಯಿತು. ಆ ಪ್ರಕಾರವಾಗಿ ನಾನು ದಿನಾಂಕ 01–07–2025 ರಂದು ಅವರು ಮಾತನಾಡಲು ಮತ್ತು ನ್ಯಾಯಾಲಯಕ್ಕೆ ಬರಲು ಆ ಸಂದರ್ಭದಲ್ಲಿ ಸಾಧ್ಯವಿಲ್ಲ ಎಂದು ಪ್ರಮಾಣ ಪತ್ರ ನೀಡಿರುತ್ತೇನೆ. ಸಾಕ್ಷಿಯು ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ–18 ಎಂದು ಗುರುತಿಸಲಾಯಿತು.

**ಪಾಟೀಸವಾಲು– ಆರೋಪಿ ಪರ ಶ್ರೀ. ಎಂ.ಬಿ.ಎಸ್ LADC ವಕೀಲರಿಂದಃ**

ಇಲ್ಲ.

**ಮರುವಿಚಾರಣೆಃ** ಇಲ್ಲ.

(It is certified that the technical system are in working condition at the both the court point and remote point, the evidence of witness was recorded through Video conference and there was a clarity in respect of sound and connectivity for both court and remote user while recording the evidence through video conference through google meet on 24–07–2026 between 1.43 p.m. to 2.03 p.m.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

Sd/–xxx

1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು–ಮಡಿಕೇರಿ.